# ಕೋರವಂಗಲದ ಬೂಚೇಶ್ವರ ದೇವಾಲಯ

ವಿಷಯ ಸಂಗ್ರಹ: ಮೈಸೂರು ಆರ್. ಶ್ರೀನಿವಾಸ ಪುಟ್ಟಿ





**ಕೋರವಂಗಲ**ವು **ಹಾಸನ** ಜಿಲ್ಲೆ ಮತ್ತು **ಹಾಸನ** ತಾಲೂಕಿಗೆ ಸೇರಿದ ಒಂದು ಗ್ರಾಮ. ಈ ಗ್ರಾಮವು ಜಿಲ್ಲಾ ಕೇಂದ್ರ **ಹಾಸನ**ದಿಂದ **ಈಶಾನ್ಯ (northeast)** ಕ್ಕೆ ೧೧ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ **ಹೊಯ್ಸಳ**ರ ಕಾಲದ ಮೂರು ದೇವಾಲಯಗಳಿದ್ದು, ಅವುಗಳಲ್ಲಿ **ಬೂಚೇಶ್ವರ** (ಭೂತನಾಥೇಶ್ವರದ ಅಪಭ್ರಂಶ) **ದೇವಾಲಯವು** ಅತ್ಯಂತ ಭವ್ಯವಾಗಿಯೂ, ಸುಂದರವಾಗಿಯೂ ಮತ್ತು ದೇವಾಲಯ ನಿರ್ಮಾಣವಾದ ನಂತರದಲ್ಲಿ ಯಾವುದೇ ಸೇರ್ಪಡೆಯೂ ಇಲ್ಲದೇ, ಇದ್ದಂತೆಯೇ ಇದ್ದು, **ಹೊಯ್ಸಳ ವಾಸ್ತು ಶಿಲ್ಪಕ್ಕೆ** ಒಂದು ಉತ್ತಮ ಉದಾಹರಣೆಯಾಗಿ ಉಳಿದಿದೆ. ದೇವಾಲಯದ ಆಗ್ನೇಯ ಭಾಗದಲ್ಲಿ (Southeast) ಕಂಡುಬರುವ ಬೃಹತ್ ಶಾಸನದ ರೀತ್ಯಾ ಈ ದೇವಾಲಯದ ನಿರ್ಮಾಣವಾದದ್ದು, ಕ್ರಿಸ್ತಶಕ ೧೧೭೩ರಲ್ಲಿ, ಒಂದನೇ ನರಸಿಂಹನ

ದಂಡನಾಯಕನಾಗಿದ್ದ **ಬೂಚಿರಾಜನು**, **ಇಮ್ಮಡಿ ವೀರಬಲ್ಲಾಳ**ನ ಪಟ್ಟಾಭಿಷೇಕದ ನೆನಪಿಗಾಗಿ ಈ ದೇವಾಲಯದ ನಿರ್ಮಾಣ ಮಾಡಿದನೆಂದು ಮೇಲೆ ಉಲ್ಲೇಖಿಸಿರುವ ಶಾಸನದಿಂದ ತಿಳಿದುಬರುತ್ತದೆ.

ಬೂಚೇಶ್ವರ ದೇವಾಲಯವು ನೆಲದ ಮೇಲೆ ನಿರ್ಮಾಣವಾದಂತೆ ಈಗ ಕಂಡುಬರುತ್ತದೆಯಾದರೂ, ಅದು ಕಲ್ಲಿನ ಜಗತಿಯ ಮೇಲೆ ನಿರ್ಮಾಣವಾಗಿದ್ದು ,ಜಗತಿಯು ಈಗ ಭೂಮಿಯೊಳಗೆ ಹುದುಗಿಹೋಗಿದೆಯೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ದೇವಾಲಯವು ಸ್ವಲ್ಪ ಎತ್ತರದಲ್ಲಿರುವುದನ್ನು ಗಮನಿಸಿದರೆ ತಜ್ಞರ ಅಭಿಪ್ರಾಯವು ಸರಿಯೆಂದು ತೋರುತ್ತದೆ.

ಕೋರವಂಗಲದ ಈ ದೇವಾಲಯವು ಬೂಚೇಶ್ವರ ದೇವಾಲಯವೆಂದು ಕರೆಯಲ್ಪಟ್ಟರೂ, ಇದು ಒಂದು ದ್ವಿಕೂಟ. ದೇವಾಲಯವನ್ನು ಅದರ ಮುಖಮಂಟಪದ ಮೂಲಕ ಪ್ರವೇಶಿಸಿದರೆ ಪೂರ್ವಾಭಿಮುಖವಾಗಿ ಬೂಚೇಶ್ವರ ಲಿಂಗ ವಿರುವ ಗರ್ಭಗುಡಿಯನ್ನೂ ಮತ್ತು ಅದರ ಎದುರುಗಡೆಯಲ್ಲಿ , ಪಶ್ಚಿಮಾಭಿಮುಖವಾಗಿ ಸೂರ್ಯನ ಗುಡಿಯನ್ನೂ ಕಾಣುತ್ತೇವೆ. ಸೂರ್ಯನ ಮೂರ್ತಿ ಸ್ವಲ್ಪ ಭಗ್ನವಾಗಿರುವುದರಿಂದ ಅದಕ್ಕೆ ಪೂಜೆಸಲ್ಲಿಸಲಾಗುತ್ತಿಲ್ಲ.

ಬೂಚೇಶ್ವರನ ಗರ್ಭಗುಡಿಯ ಮೇಲೆ ಒಂದು ಸುಂದರವಾದ ಶಿಖರವಿದೆ. ಗರ್ಭಗೃಹದ ನಂತರದಲ್ಲಿ ಶುಕನಾಸಿ , ನವರಂಗ ಮತ್ತು ಮುಖಮಂಟಪಗಳಿವೆ. ಮುಖಮಂಟಪದ ಪೂರ್ವದಲ್ಲಿ ಅಂದರೆ ಬೂಚೇಶ್ವರ ಲಿಂಗದ ಎದುರುಭಾಗದಲ್ಲಿ ಸೂರ್ಯನ ಗುಡಿ ಇದೆ. ದೇವಾಲಯದ ಅಧಿಷ್ಠಾನವನ್ನು ಹೊರತುಪಡಿಸಿ, ಉಳಿದೆಲ್ಲ ಭಾಗಗಳೂ ಅನೇಕ ಶಿಲ್ಪಗಳಿಂದ ಅಲಂಕೃತವಾಗಿವೆ.

ಬೂಚೇಶ್ವರ ದೇವಾಲಯದ ಅತ್ಯಂತ ಆಕರ್ಷಕ ಭಾಗವೆಂದರೆ ಅದರ ಹೊರಗೋಡೆಯ ಮಧ್ಯಭಾಗ ಈ ಭಾಗದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಶಿಲ್ಪಗಳಿದ್ದು ದೇವಾಲಯವನ್ನು ಸಂಪೂರ್ಣವಾಗಿ ಸುತ್ತುವರೆದಿವೆ. ನವರಂಗದ ದಕ್ಷಿಣದಿಂದ ಪ್ರಾರಂಭಿಸಿ, ಪ್ರದಕ್ಷಿಣಾಕಾರವಾಗಿ ಚಲಿಸಿದರೆ ಕಂಡುಬರುವ ಮುಖ್ಯ ವಿಗ್ರಹಗಳು ಕೆಳಗೆ ತಿಳಿಸಿರುವಂತೆ ಇವೆ :

**ಗಮನಿಸಿ :**

1.ದೇವಾಲಯವು ಶಿವನದ್ದಾಗಿರುವುದರಿಂದ ,ಹೊರಭಿತ್ತಿಯಲ್ಲಿ ಕಾಣುವ ಬಹಳಷ್ಟು ವಿಗ್ರಹಗಳು ಶಿವನಿಗೆ ಸಂಬಂಧ ಪಟ್ಟಿದ್ದಾಗಿವೆ.

2.ವಿಗ್ರಹಗಳ ಕೈಗಳಲ್ಲಿ ಕಂಡುಬರುವ ಆಯುಧಗಳನ್ನು ಕ್ರಮವಾಗಿ ಬಲ ಕೆಳಗೈನಿಂದ ಪ್ರಾರಂಭಿಸಿ ಮೇಲಕ್ಕೆ ಹೋಗುತ್ತಾ ಎಡ ಮೇಲುಗೈ, ನಂತರ ಎಡ ಕೈಗಳಲ್ಲಿ ಇರುವಂತೆ ತಿಳಿಸಲಾಗಿದೆ.

## ಪೂರ್ವ ಮುಖ




| | |
|---|---|
| 1 | ಸ್ಥಾನಕ ಸರಸ್ವತೀ (ಅಕ್ಷಮಾಲಾ, ಅಂಕುಶ, ಪಾಶ ಮತ್ತು ಪುಸ್ತಕ) |
| 2 | ನೃತ್ಯ ಗಣಪತಿ; ಪೀಠದ ಮೇಲೆ ಗಣಪತಿಯ ವಾಹನ ಇಲಿ. |
| 3 | ಅರ್ಜುನನಿಂದ ಮತ್ಸ್ಯ ಯಂತ್ರ ಭೇದನ |
| 4 | ಸ್ಥಾನಕ ಪಾರ್ವತೀ (ಡಮರು, ತ್ರಿಶೂಲ, ಅಂಕುಶ, ಪಾಶ) |

## ದಕ್ಷಿಣ ಮುಖ




| | |
|---|---|
| 5 | ಭೈರವ |
| 6,7 | ಪ್ರಹ್ಲಾದನನ್ನು ಹಿಂಸಿಸಲು ಆಜ್ಞೆ ನೀಡುತ್ತಿರುವ ಹಿರಣ್ಯಕಶಿಪು (ಈ ಶಿಲ್ಪದ ಮೇಲ್ಭಾಗದಲ್ಲಿ ಪ್ರದ್ಯೊಜ ' ಕ ' ಎಂಬ ಶಾಸನವಿದೆ ) |
| 8,9,10 | ಅಗ್ನಿ, ಆನೆ, ಸರ್ಪ ಹಾಗೂ ಬಂಧನಗಳಿಂದ ಪ್ರಹ್ಲಾದನಿಗೆ ಹಿಂಸೆ |
| 11 | ಸ್ತಂಭದಲ್ಲಿ ಪ್ರತ್ಯಕ್ಷನಾಗಿರುವ ನರಸಿಂಹ |

ಮತ್ತು ಪ್ರಹ್ಲಾದ




| | |
|---|---|
| 12 | ಉಗ್ರನರಸಿಂಹನಿಂದ ಹಿರಣ್ಯಕಶಿಪುವಿನ ಸಂಹಾರ. ನರಸಿಂಹನ ಪಕ್ಕದಲ್ಲಿ ಲಕ್ಷ್ಮೀ ಮತ್ತು ಪ್ರಹ್ಲಾದ |




| | |
|---|---|
| 13,14, 15 | ವಾದ್ಯ ಕಲಾವಿದರಿಂದ **ನರಸಿಂಹನ** ವಿಜಯದ ಸಂಭ್ರಮಾಚರಣೆ ; ಕಲಾವಿದರು ತಮ್ಮ - ತಮ್ಮ ವಾದ್ಯಗಳನ್ನು ನುಡುಸುತ್ತಿದ್ದಾರೆ. |
| 16 | **ಭೈರವ** |
| 17 | **ಕಾಪಾಲಿಕ** |
| 18 | ಪದ್ಮ ಮತ್ತು ಕಲಶವನ್ನು ಹಿಡಿದಿರುವ **ದೇವಿ** |
| 19 | ನರ್ತಿಸುತ್ತಿರುವ **ಗಜಾಸುರಮರ್ದನ** |

## ಪಶ್ಚಿಮ ಮುಖ





| | |
|---|---|
| 20 | ದೈತ್ಯ ನೊಬ್ಬವನ್ನು ತುಳಿಯುತ್ತಿರುವ **ಶ್ವೇತವರಾಹ** |
| 21 | ಸ್ಥಾನಕ ಲಕ್ಷ್ಮೀ |
| 22 | ಸೂರ್ಯ |
| 23 | ನೃತ್ಯ ಮೋಹಿನೀ |

## ದಕ್ಷಿಣ ಮುಖ





| | |
|---|---|
| 24-26 | ಶ್ರೀದೇವಿ ಮತ್ತು ಭೂದೇವಿಯರ ನಡುವೆ ತ್ರಿವಿಕ್ರಮ. |
| 27-29 | **ಲಕ್ಷ್ಮಣ** ಮತ್ತು **ಹನುಮಂತನ** ನಡುವೆ ಕೋದಂಡರಾಮ. |
| 30-33 | ಬಲಗಡೆಯಲ್ಲಿ **ಬ್ರಹ್ಮ** - **ಸರಸ್ವತೀ** ಮತ್ತು ಎಡಗಡೆಯಲ್ಲಿ **ಕೇಶವ**ನ ನಡುವೆ ಆಸೀನ **ಉಮಾ ಮಹೇಶ್ವರ**. |
| 34. | ಕತ್ತಿ ಮತ್ತು ಕಲಶವನ್ನು ಹಿಡಿದಿರುವ **ದುರ್ಗಾ**. |
| 35. | **ದಕ್ಷಿಣಾ ಮೂರ್ತಿಯ**ರೂಪದಲ್ಲಿ **ಸ್ಥಾನಕ ಶಿವ** ( **ಅಕ್ಷಮಾಲ , ಪಾಶ , ಫಲ , ಪುಸ್ತಕ**). |

## ಪಶ್ಚಿಮ ಮುಖ




| | |
|---|---|
| **36,37** | ಸ್ಥಾನಕ ಪುರುಷ ಮತ್ತು ಸ್ತ್ರೀದೇವತೆಗಳು ಬಹುಶ: ರತಿ-ಮನ್ಮತ ( ಮೂರ್ತಿಗಳಿಗೆ ಹಾನಿಯಾಗಿದೆ). |
| **38.** | ಪ್ರೀತಿಯಲ್ಲಿ ತೊಡಗಿರುವ ದಂಪತಿಗಳು. |
| **39-41** | ಇಬ್ಬರು ಸಂಗಾತಿಯರೊಡನೆ **ಧರಣೀವರಾಹ**. |
| **42.** | ಉದ್ದನೆಯ ನಿಲುವಂಗಿಯಲ್ಲಿ ಚಕ್ರ ಹಿಡಿದಿರುವ **ದಕ್ಷಿಣಾಮೂರ್ತಿ.** |
| **43.** | ಹಾನಿಯಾಗಿರುವ ಪುರುಷ ದೇವತೆ |
| **44.** | **ಸ್ಥಾನಕ ಶಿವ** (ಅಕ್ಷಮಾಲ, ತ್ರಿಶೂಲ, ಡಮರು,ಫಲ) |





| | |
|---|---|
| **45.** | **ಸ್ಥಾನಕ ಶಿವ ( ವಿಗ್ರಹ ಸಂಖ್ಯೆ 44 ರಂತೆಯೇ ಇದೆ).** |
| **46.** | **ಸ್ಥಾನಕ ಸರಸ್ವತೀ ( ಫಲ, ಅಕ್ಷಮಾಲ, ಕಲಶ,ಪುಸ್ತಕ).** |
| **47.** | **ವೀಣಾಪಾಣಿ ಸರಸ್ವತೀ**, ಉಳಿದೆರಡು ಕೈಗಳಲ್ಲಿ ಅಕ್ಷಮಾಲ ಮತ್ತು ಪುಸ್ತಕ |
| **48-50** | ಬಲಗಡೆಯಲ್ಲಿ ದೇವೀ ಮತ್ತು ಎಡಗಡೆಯಲ್ಲಿ ಮೃದಂಗವಾದಕನ ನಡುವೆ **ತಾಂಡವೇಶ್ವರ.** |
| **51.** | ಭಗ್ನಗೊಂಡಿರುವ ಮೂರ್ತಿ. |
| **52.** | ಪದ್ಮ ಮತ್ತು ಫಲಗಳನ್ನು ಹಿಡಿದಿರುವ ದೇವತೆ. |
| **53.** | ಭಗ್ನಗೊಂಡಿರುವ ಮೂರ್ತಿ. |
| **54.** | ಪ್ರೀತಿಯಲ್ಲಿ ತೊಡಗಿರುವ ದಂಪತಿಗಳು. |

| | |
|---|---|
| **55.** | ನೃತ್ಯ ಮೋಹಿನೀ. |
| **56.** | ತನ್ನ ಬಲಗೈನಲ್ಲಿ ಡಮರು ಮತ್ತು ಎಡ ಕೈನಲ್ಲಿ ಪಾತ್ರೆಯನ್ನು ಹಿಡಿದು ನರ್ತಿಸುತ್ತಿರುವ ದೇವೀ. |




| | |
|---|---|
| **57** | ತನ್ನ ಎಡ ಕೈ ಮೇಲೆ ಗಿಣಿ ಮತ್ತು ಬಲ ಕೈನಲ್ಲಿ ಫಲ ಹಿಡಿದಿರುವ ಸ್ತ್ರೀ. |
| **58** | ಕಾಪಾಲಿಕೆಯ ರೂಪದಲ್ಲಿ ಕಾಲೀ - ನಗ್ನ ವಿಗ್ರಹ. |
| **59,60** | ಲಕ್ಷ್ಮಿಯೊಡನೆ ಪ್ರದ್ಯುಮ್ನ |




| | |
|---|---|
| **61.** | ಅನಂತಶಯನನ ನಾಭಿಯಿಂದ ಮೇಲೆದ್ದಿರುವ ಬ್ರಹ್ಮ. |
| **62.** | ಕಾಳಿಂಗಮರ್ದನ. |
| **63.** | ವೇಣುಗೋಪಾಲ. |
| **64.** | ನವನೀತಚೋರ ಕೃಷ್ಣ |
| **65.** | ಕೊಂಡಿಗಳಿಂದ ಹೆಣೆದುಕೊಂಡಿರುವ ನಾಗ - ನಾಗಿಣಿ. |
| **66** | ಬಲಿಯಿಂದ ವರವನ್ನು ಪಡೆಯುತ್ತಿರುವ ವಾಮನ. |
| **67** | ತನ್ನ ಬಲಗಾಲನ್ನು ಬ್ರಹ್ಮಲೋಕಕ್ಕೆ ಎತ್ತಿರುವ ತ್ರಿವಿಕ್ರಮ ; ಕೆಳಗಡೆ ಹರಿಯುತ್ತಿರುವ ಗಂಗೆ. |




| | |
|---|---|
| **68.** | **ಕೈಲಾಸ ಪರ್ವತವನ್ನು ಎತ್ತಿರುವ ರಾವಣ** |




| | |
|---|---|
| **69,70.** | ಮೋಹಿನಿಯ ನೃತ್ಯವನ್ನು ವೀಕ್ಷಿಸುತ್ತಿರುವ ದಕ್ಷಿಣಾಮೂರ್ತಿ. |
| **71.** | ಭೈರವ |
| **72-74.** | ತನ್ನ ಎಡಗಡೆಯಲ್ಲಿ ಗರುಡ ಮತ್ತು ಬಲಗಡೆಯಲ್ಲಿ ಲಕ್ಷ್ಮಿಯನಡುವೆ ಗೋವರ್ಧನಧಾರಿ ಕೃಷ್ಣ. |
| **75.** | ನಂದಿ ವಾಹನದ ಮೇಲೆ ಉಮಾ - ಮಹೇಶ್ವರ. |

## ಪೂರ್ವ ಮುಖ




| | |
|---|---|
| **76.** | ಭೈರವ |
| **77.** | ಬಲಗೈನಲ್ಲಿ ಗದೆ ಹಿಡಿದಿರುವ ವೀರಭದ್ರ. |
| **78.** | ಷಣ್ಮುಖ ಪೀಠದ ಮೇಲೆ ನವಿಲು |
| **79.** | ಮಹಿಷಮರ್ದಿನಿ |

## ಸೂರ್ಯ ದೇವಾಲಯದ ಹೊರಗೋಡೆಯ ಮೇಲಿನ ಶಿಲ್ಪಗಳು

## ಉತ್ತರ ಮುಖ





| | |
|---|---|
| **80.** | ಪದ್ಮವನ್ನು ಹಿಡಿದಿರುವ ಸ್ಥಾನಕ ದೇವತೆ |
| **81.** | ಕಪಿಯೊಂದರಿಂದ ಪೀಡಿಸಲ್ಪಟ್ಟಿರುವ ಮೋಹಿನೀ. |
| **82.** | ಭಗ್ನವಾಗಿರುವ ಸರಸ್ವತೀ |
| **83.** | ಭಗ್ನವಾಗಿರುವ ಸ್ಥಾನಕ ಶಿವ. |
| **84.** | ಗಿಣಿಗೆ ಆಹಾರ ನೀಡುತ್ತಿರುವ ಸ್ತ್ರೀ |




| | |
|---|---|
| **85-89** | ವಾದ್ಯಗಾರರೊಂದಿಗೆ ನೃತ್ಯ ದುರ್ಗಾ |
| **90** | ತಾಳದೊಂದಿಗೆ ಸ್ತ್ರೀ |
| **91** | ಸ್ಥಾನಕ ಚಂದ್ರ |

## ಪೂರ್ವ ಮುಖ




| | |
|---|---|
| **92** | ಸ್ಥಾನಕ ಸೂರ್ಯ. |
| **93** | ಚಾಮರಧಾರಿಣಿ. |
| **94-98** | ವಾದ್ಯ ಕಲಾವಿದರೊಂದಿಗೆ ನೃತ್ಯ ಗಣಪತಿ. |
| **99** | ಪದ್ಮ ಮತ್ತು ಫಲಗಳನ್ನು ಹಿಡಿದಿರುವ ಸ್ತ್ರೀ. |
| **100** | ಸೂರ್ಯ. |

## ದಕ್ಷಿಣ ಮುಖ




| | |
|---|---|
| **101.** | ಸೂರ್ಯ; ಪೀಠರ ಮೇಲೆ ಸಪ್ತಾಶ್ವಗಳು . |
| **102.** | ಮನ್ಮಥ. |
| **103.** | ಗಜೇಂದ್ರಮೋಕ್ಷ ( ನೀರಿನಲ್ಲಿ ಮುಳುಗಿರುವ ಯೋಗಿಯಮೇಲೆ ಮೊಸಳೆ. ಮೊಸಳೆಯು ತನ್ನ ಮೇಲಿರುವ ಆನೆಯಕಾಲನ್ನು ಹಿಡಿದುಕೊಂಡಿದೆ.ಆನೆಯು ತನ್ನ ಸೊಂಡಿಲನಿಂದ ವಿಷ್ಣುವಿಗೆ ಕಮಲವನ್ನು ನೀಡುತ್ತಿದೆ. ಗರುಡನ ಮೇಲಿರುವ ವಿಷ್ಣುವು ಚಕ್ರದಿಂದ ಮೊಸಳೆಯನ್ನು |

| | |
|---|---|
| | ಹೊಡೆದು, ಅದರೊಳಗಿದ್ದ ದೇವತೆಯನ್ನು ಬಿಡುಗಡೆ ಮಾಡಿರುವನು ) |
| **104-106** | ಪರಿಚಾರಕರೊಡನೆ ಸುಖಾಸನದಲ್ಲಿ ಉಮಾ - ಮಹೇಶ್ವರ |
| **107** | ಸಂಹಾರ ಸರಪಳಿ ( ಜಿಂಕೆಯೊಂದನ್ನು ಹೆಬ್ಬಾವು ಅರ್ಧನುಂಗಿದೆ. ಆ ಹೆಬ್ಬಾವನ್ನು ಆನೆಯೊಂದು ಸೊಂಡಿಲಿನಿಂದ ಹಿಡಿದಿದೆ. ಆನೆಯ ಮೇಲೆ ಸಿಂಹ ಹಾರಿದೆ. ಸಿಂಹವನ್ನು ಶರಭ ಹಿಡಿದುಕೊಂಡಿದೆ. ಶರಭವನ್ನು ಗಂಡಭೇರುಂಡ ಎತ್ತಿಕೊಂಡುಹೋಗುತ್ತಿದೆ. ಕೆಳಗಡೆಯಲ್ಲಿ ಇವೆಲ್ಲವನ್ನೂ ಒಬ್ಬ ಸನ್ಯಾಸಿ ಮತ್ತು ಒಬ್ಬ ಚಾಲಕ ನೋಡುತ್ತಿದ್ದಾರೆ ) |
| **108-110** | ಪರಿಚಾರಿಕೆಯರ ನಡುವೆ ದ್ವಿಭುಜ ದೇವೀ |
| **111,112** | ಮೋಹಿನೀ ಮತ್ತು ದಕ್ಷಿಣಾ ಮೂರ್ತಿ **(ಮೂರ್ತಿಗಳು ಹಾನಿಯಾಗಿವೆ)** |

ದೇವಾಲಯದ ಸುತ್ತ ಸುಮಾರು ಒಂದೂವರೆ ಅಡಿ ಮುಂದಕ್ಕೆ ಚಾಚಿಕೊಂಡಿರುವ ಸೂರು ಇದೆ. ಇದರ ಕೆಳಭಾಗ ಕಮಾನಿನಂತೆ ಇದೆ. ಕೈಪಿಡಿಗೋಡೆಯಲ್ಲಿ **(in the parapet )** ಸಿಂಹ, ಸಳ, ಮಕರ ಮತ್ತು ರಾಜನ ದರ್ಬಾರಿನ ಶಿಲ್ಪಗಳನ್ನು ಕಾಣಬಹುದು. ಇವುಗಳ ಮೇಲಿನ ಸಾಲಿನಲ್ಲಿ ಕೀರ್ತಿ ಮುಖ, ತೋರಣ, ಯಕ್ಷ, ಭೈರವ, ಮೋಹಿನಿ ಮೊದಲಾದ ವಿಗ್ರಹಗಳನ್ನು ಕಾಣಬಹುದು. ಇಂತಹ ಇತರೇ ವಿಗ್ರಹಗಳಲ್ಲಿ ಪ್ರಮುಖವಾದವುಗಳೆಂದರೆ ದಕ್ಷಿಣದಲ್ಲಿ ಯೋಗನರಸಿಂಹ ಮತ್ತು ಉತ್ತರದಲ್ಲಿ ಉಮಾಮಹೇಶ್ವರ.

# ಶಿಖರ



ಈ ದೇವಾಲಯದ ಶಿಖರವು ಬಳಪದ ಕಲ್ಲಿನದಾಗಿದ್ದು, ನಾಲ್ಕು ಅಂತಸ್ತುಗಳನ್ನು ಹೊಂದಿದೆ. ಶಿಖರವು ಅನೇಕ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಈ ಶಿಲ್ಪಗಳಲ್ಲಿ ಮುಖ್ಯವಾದುವೆಂದರೆ : ಉತ್ತರದ ಫಲಕದಲ್ಲಿ ಐರಾವತದ ಮೇಲೆ ಇಂದ್ರ , ಪೂರ್ವ ಫಲಕದಲ್ಲಿ ತಾಂಡವೇಶ್ವರ ಹಾಗೂ ಶುಕನಾಸಿಯ ಮೇಲೆ ಚಾಚಿರುವ ಭಾಗದಲ್ಲಿ ಅತಿ ಸುಂದರವಾದ ಸಳನ ವಿಗ್ರಹಗಳು.

## ಮುಖ ಮಂಟಪ



ದೇವಾಲಯದ ಮುಖಮಂಟಪದ ಕೆಳಭಾಗದಲ್ಲಿ ಚಿತ್ರಪಟ್ಟಿಕೆಗಳಿದ್ದು ಅವುಗಳಲ್ಲಿ ಉಪಗೋಪುರಗಳು (ಸಣ್ಣ ಶಿಖರಗಳ ಮಾದರಿಗಳು turrets), ಯಕ್ಷರುಗಳು, ಲತಾತೋರಣಗಳು, ಸಿಂಹಗಳು, ನರ್ತಕರು, ಗಾಯಕರು ಹಾಗೂ ದೇವ - ದೇವಿಯರ ವಿಗ್ರಹಗಳನ್ನು ಕಾಣಬಹುದು. ಇವುಗಳ ಮೇಲೆ ಮುಂದಕ್ಕೆ ಚಾಚಿರುವ ಕಟಾಂಜನವಿದೆ.

## ಪ್ರವೇಶದ್ವಾರ



ದೇವಾಲಯವನ್ನು ಉತ್ತರ ಮತ್ತು ದಕ್ಷಿಣಗಳಿಂದ ಪ್ರವೇಶಿಸಬಹುದು. ದಕ್ಷಿಣದ ಪ್ರವೇಶದ್ವಾರವು ಭವ್ಯವಾಗಿದ್ದು , ಇಕ್ಕೆಲಗಳಲ್ಲಿ ಬಳಪದಕಲ್ಲಿನ ಸುಂದರ ಆನೆಗಳನ್ನು ಕಾಣುತ್ತೇವೆ. ದ್ವಾರಬಂಧದ ಇಕ್ಕೆಲಗಳಲ್ಲಿ ದ್ವಾರಪಾಲಕರನ್ನೂ ಮತ್ತು ಚಾಮರಧಾರಿಣಿಯರನ್ನೂ ಕಾಣಬಹುದು. ದ್ವಾರಪಾಲಕರ ಹಿಂದೆ ಲತಾಪಟ್ಟಿಕೆ ಇದೆ. ದೇವಾಲಯದ ಉತ್ತರದ್ವಾರದಲ್ಲೂ ಕಲ್ಲಿನ ಆನೆಗಳು ಇದ್ದವೆಂದು ತಿಳಿದುಬಂದಿದೆ. ಆದರೆ ಈಗ ಅವು ಅದೃಶ್ಯವಾಗಿವೆ.

## ಮಂಟಪದ ಒಳಭಾಗ



ಮಂಟಪದ ಒಳಭಾಗವನ್ನು ಒಂಬತ್ತು ಅಂಕಣಗಳಾಗಿ ವಿಭಜಿಸಲಾಗಿದೆ. ಮಂಟಪದ ಸುತ್ತಲೂ ಕಲ್ಲಿನ ಜಗತಿ ಇದೆ. ಈ ಮಂಟಪದ ಪಶ್ಚಿಮ ಭಾಗದ ಅಂಕಣ ಬೂಚೇಶ್ವರ ಗರ್ಭಗುಡಿಯ ಶುಕನಾಸಿಯಾಗಿಯೂ ಕಾಣುತ್ತದೆ. ಮಂಟಪದೊಳಗಿನ ಮೇಲ್ಛಾವಣಿಗಳ ಮೂಲೆಗಳಲ್ಲಿ ಸಿಂಹಮುಖಗಳು ಕಂಡುಬರುತ್ತವೆ. ಮಂಟಪದೊಳಗಿರುವ ಸ್ತಂಭಗಳು ಗಂಟೆಯ ಆಕಾರದಲ್ಲಿವೆ, ಮತ್ತು ಅವುಗಳು ಮೂರು ಬೇರೆಬೇರೆ ಗ್ರಾತ್ರಗಳಲ್ಲಿ ಇವೆ. ಮಂಟಪದಲ್ಲಿನ ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳಿವೆ. ಮಧ್ಯದ ಭುವನೇಶ್ವರಿ ಯಲ್ಲಿ ತೂಗುಕಮಲ ಇದೆ. ಮಂಟಪದ ಮೇಲ್ಛಾವಣೆಯಲ್ಲಿ ಲಾಳಾಕಾರದ ಕಮಾನುಗಳಿವೆ.

## ಸೂರ್ಯ ದೇವಾಲಯ

ಸೂರ್ಯ ದೇವಾಲಯವು ಮೂಲದೇವಾಲಯದ ಗರ್ಭಗುಡಿಯ (ಬೂಚೇಶ್ವರ) ಎದುರು ಭಾಗಕ್ಕೆ ಇದೆ. ಇಲ್ಲಿ ಕಂಡುಬರುವ ದ್ವಾರಪಾಲಕರ ವಿಗ್ರಹಗಳು ಅಪೂರ್ವವಾಗಿದೆ. ಈ ದ್ವಾರಪಾಲಕರ ಕೈಗಳಲ್ಲಿ ಕಮಲ, ಧನುರ್ಬಾಣ ಮತ್ತು ಅಂಕುಶ ಹಾಗೂ ಮುಸಲಗಳಿವೆ. ಸೂರ್ಯನ ದ್ವಾರಪಾಲಕರುಗಳಿಗೆ ಈ ರೀತಿಯ ಆಯುಧಗಳು ಮತ್ತೆಲ್ಲಿಯೂ ಕಂಡುಬರುವುದಿಲ್ಲವೆಂದು ತಜ್ಞರುಗಳು ಹೇಳುತ್ತಾರೆ.

ಸೂರ್ಯನ ವಿಗ್ರಹ 6 ಅಡಿಯಿದ್ದು, ಪೀಠದ ಮೇಲೆ ಅರುಣ ಮತ್ತು ಅವನ ಸಪ್ತಾಶ್ವಗಳಿವೆ. ಅತ್ಯಂತ ಸುಂದರ ಹಾಗೂ ಪ್ರಮಾಣಬದ್ಧವಾಗಿರುವ ಈ ಮೂರ್ತಿಯ ಕೈಗಳಲ್ಲಿ ಕಮಲವಿದೆ. ಸೂರ್ಯನ ಇಕ್ಕೆಲಗಳಲ್ಲಿ ಬಾಣಪ್ರಯೋಗಮಾಡುತ್ತಿರುವ ಛಾಯಾದೇವಿಯರನ್ನು ಕಾಣಬಹುದು. ಮೂರ್ತಿಯ ತೋರಣದ ಮೇಲೆ ದ್ವಾದಶ ಆದಿತ್ಯರನ್ನು ಕಾಣಬಹುದು. ( ದ್ವಾದಶಾದಿತ್ಯರು : ಅದಿತಿಯ ಮಕ್ಕಳಾದ ವಿವಸ್ವನ್, ಆರ್ಯಮನ್, ತ್ವಷ್ಟ, ಸವಿತೃ, ಭಗ, ಧಾತ, ಮಿತ್ರ, ವರುಣ, ಅಂಶ, ಪೂಶನ್, ಇಂದ್ರ, ವಿಷ್ಣು )

## ನವರಂಗ

ನವರಂಗದಲ್ಲಿ ಶೈವದ್ವಾರಪಾಲಕರನ್ನು ಕಾಣುತ್ತೇವೆ. ದ್ವಾರಪಾಲಕರ ಮೇಲೆ ಲತಾಪಟ್ಟಿಕೆಗಳನ್ನೂ, ಹಾಸುಗಲ್ಲಿನಮೇಲೆ (on the lintel) ಗಜಲಕ್ಷ್ಮೀ ಮತ್ತು ಐದು ಗೋಪುರಗಳನ್ನು ಕಾಣಬಹುದು ನವರಂಗವು ಒಂಬತ್ತು ಅಂಕಣಗಳನ್ನು ಹೊಂದಿದ್ದು ಅದೇ ಸಂಖ್ಯೆಯ ಭುಲನೇಶ್ವರಿಗಳನ್ನು ಹೊಂದಿದೆ. 20 ಚದರಡಿಯ ನವರಂಗದಲ್ಲಿ ಆರು ಗೂಡುಗಳಿದ್ದು , ಅವುಗಳಲ್ಲಿ ಮೂರುಗೂಡುಗಳು ದಕ್ಷಿಣ ಭಾಗದಲ್ಲೂ ಮತ್ತು ಉಳಿದ ಮೂರು ಗೂಡುಗಳು ಉತ್ತರ ಭಾಗದಲ್ಲೂ ಇವೆ. ಉತ್ತರದ ಮೂರು ಗೂಡುಗಳು ಈಗ

ಖಾಲಿಯಾಗಿವೆ. ದಕ್ಷಿಣದ ಒಂದು ಗೂಡಿನಲ್ಲಿ ಸಪ್ತಮಾತೃಕೆಯರನ್ನು ಅವರ ವಾಹನದ ಸಮೇತ ಒಂದು ಕಲ್ಲಿನ ಚಪ್ಪಡಿಯಮೇಲೆ ಕಾಣುತ್ತೇವೆ. ಈ ಚಪ್ಪಡಿಯ ಎಡಭಾಗದಲ್ಲಿ ಗಣೇಶನನ್ನೂ ಮತ್ತು ಬಲಗಡೆಯಲ್ಲಿ ವೀರಭದ್ರನನ್ನೂ ಕಾಣಬಹುದು. ಮತ್ತೊಂದು ಗೂಡಿನಲ್ಲಿ ಆಸೀನ ಸರಸ್ವತಿಯ ವಿಗ್ರಹವಿದೆ; ಸರಸ್ವತಿಯ ನಾಲ್ಕು ಕೈಗಳಲ್ಲಿ ಅಕ್ಷಮಾಲಾ, ಅಂಕುಶ, ಪಾಶ ಮತ್ತು ಪುಸ್ತಕಗಳಿವೆ. ಮೂರನೆಯ ಗೂಡಿನಲ್ಲಿ ಗಣಪತಿಯ ವಿಗ್ರಹವಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಎಲ್ಲವೂ ದುಂಡಾಗಿ ಘಂಟಾಕಾರವಾಗಿವೆ. ಮೇಲೆ ಒಂಬತ್ತು ಭುವನೇಶ್ವರಿಗಳಿದ್ದು ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಮತ್ತು ಅಷ್ಟಕೋನಗಳನ್ನು ಕಾಣಬಹುದು.

## ಬೂಚೇಶ್ವರ ಸನ್ನಿಧಿ

ಬೂಚೇಶ್ವರ ಸನ್ನಿಧಿಗೆ ಅಂಟಿಕೊಂಡಿರುವ ಶುಕನಾಸಿಯ ಮೇಲ್ಚಾವಣಿಯಲ್ಲಿ ಪದ್ಮಗಳಿವೆ. ಶುಕನಾಸಿಯು ಪೂರ್ವಭಾಗದಲ್ಲಿ ತೆರದಿದೆ. ಗರ್ಭಗೃಹದ ದ್ವಾರವು ನವರಂಗದ ದ್ವಾರದಂತೆಯೇ ಇದೆಯಾದರೂ ಯಾವುದೇ ರೀತಿಯ ಶಿಲ್ಪಾಲಂಕಾರಗಳಿಲ್ಲ. ಎಂಟು ಅಡಿ ಉದ್ದ ಮತ್ತು ಎಂಟು ಅಡಿ ಅಗಲದ ಗರ್ಭಗುಡಿಯಲ್ಲಿ , ಸುಮಾರು ಮೂರು ಅಡಿ ಎತ್ತರದ, ಚಪ್ಪಟೆ ತಲೆಯ ಕಪ್ಪಾದ ಶಿವಲಿಂಗವಿದೆ.

**ಟಿಪ್ಪಣಿ :**

1.ಸಪ್ತಮಾತೃಕೆಯರು ಮತ್ತು ಅದರ ವಾಹನಗಳು:

| | | |
|---|---|---|
| ೧ | ಬ್ರಾಹ್ಮೀ | ಹಂಸ |
| ೨ | ಮಾಹೇಶ್ವರೀ | ನಂದಿ |
| ೩ | ಕೌಮಾರೀ | ನವಿಲು |
| ೪ | ವೈಷ್ಣವೀ | ಗರುಡ |
| ೫ | ವಾರಾಹೀ | ಕೋಣ |
| ೬ | ಇಂದ್ರಾಣಿ | ಆನೆ |
| ೭ | ಚಾಮುಂಡ | ಗೂಬೆ |

2. ಅಷ್ಟ ದಿಕ್ಪಾಲಕರು ಮತ್ತು ಅವರ ವಾಹನಗಳು

| | | | |
|---|---|---|---|
| ೧ | ಇಂದ್ರ | ಐರಾವತ | ಪೂರ್ವ |
| ೨ | ಅಗ್ನಿ | ಟಗರು | ಆಗ್ನೇಯ (SE) |
| ೩ | ಯಮ | ಕೋಣ | ದಕ್ಷಿಣ |
| ೪ | ನಿರುತಿ | ಕುದುರೆ | ನೈಋತ್ಯ (SW) |
| ೫ | ವರುಣ | ಮೊಸಳೆ | ಪಶ್ಚಿಮ |
| ೬ | ವಾಯು | ಹುಲ್ಲೆ | ವಾಯುವ್ಯ (NW) |

| | | | |
|---|---|---|---|
| ೭ | ಕುಬೇರ | ನರ | ಉತ್ತರ |
| ೮ | ಈಶಾನ | ಎತ್ತು | ಈಶಾನ್ಯ (NE) |

**ಗ್ರಂಥಋಣ:**

Mysore Archaeological Report

Cover image: https://commons.wikimedia.org/wiki/File:Bucesvara_temple_at_Koravangala,_frontal_view.jpg#/media/File:Bucesvara_temple_at_Koravangala,_frontal_view.jpg